

# ಬಟ್ಟಲು ಮಂದಾರ

**ಸುವಾಸನಾ ಭರಿತ ಹೂ ಬಿಡುವ ಈ ಸಸ್ಯ ಬಹೂಪಯೋಗಿ. ಔಷಧೀಯ ಗುಣ ಹೇರಳವಾಗಿರುವ ಇದರ ತೊಗಟೆ, ಹೂ ಮತ್ತು ಬೇರುಗಳನ್ನು ಮುಖ್ಯವಾಗಿ ಆಯುರ್ವೇದದಲ್ಲಿ ಔಷಧಿ ತಯಾರಿಕೆಗೆ ಬಳಸುತ್ತಾರೆ**



★ ಚಿತ್ರ- ಬರಹ: ಶೈಲಜಾ ಕೇಕಣಾಜೆ

ಎಲ್ಲರ ಮನೆಯಂಗಳದಲ್ಲೂ ಸಾಮಾನ್ಯವಾಗಿ ಗೋಚರಿಸುವ ಒಂದು ಹೂ ಬಟ್ಟಲು ಮಂದಾರ. ನಂದಿಬಟ್ಟಲು, ಶ್ವೇತ ಕಾಂಚನಾರ, **white orchid snowy flower** ಎಂದೆಲ್ಲ ಕರೆಯಲ್ಪಡುವ ಈ ಸುವಾಸನಾ ಭರಿತ ಹೂ ಬಿಡುವ ಸಸ್ಯ ಬಹೂಪಯೋಗಿ. ಸೀಝಲ್ಪೀನಿಯಾ ಸಮುದಾಯಕ್ಕೆ ಸೇರಿದ ಇದರ ಸಸ್ಯ ಶಾಸ್ತ್ರೀಯ ಹೆಸರು ಬೌಹೀನಿಯಾ ಅಕುಮಿನಟಾ **(bauhinia acuminata)**. ಈ ಗಿಡ 2– 3 ಮೀಟರ್‌ಗಳವರೆಗೆ ಬೆಳೆದು ಹಬ್ಬುತ್ತದೆ. ಎಲೆಗಳು ಹೃದಯಾಕಾರದಲ್ಲಿ 6 ರಿಂದ 15 ಸೆಂಟಿ ಮೀಟರ್ ಉದ್ದವಿದ್ದು ಹಸುವಿನ ಪಾದದಂತೆ ಮಧ್ಯೆ 5 ಸೆಂಟಿ ಮೀಟರಿನಷ್ಟು ಒಳ ಎಡೆಯನ್ನು ಹೊಂದಿದೆ. ಹೂಗಳು 8 –12 ಸೆಂಟಿ ಮೀಟರಿನ ವ್ಯಾಸದಲ್ಲಿ 5 ಎಸಳುಗಳನ್ನು ಹೊಂದಿದ್ದು, 10 ಹಳದಿ ಬಣ್ಣದ ಕೇಸರ ಹಾಗೂ ಒಂದು ಹಸಿರು ಶಲಾಕೆಯಿಂದ ಕೂಡಿದೆ. 6–10 ಬೀಜಗಳಿರುವ ಕಾಯಿ ಸಾಧಾರಣ 10 ಸೆಂಟಿಮೀಟರ್‌ಗಳಷ್ಟು ಉದ್ದವಿರುತ್ತದೆ.

ಔಷಧೀಯ ಗುಣ ಹೇರಳವಾಗಿರುವ ಇದರ ತೊಗಟೆ, ಹೂ ಮತ್ತು ಬೇರುಗಳನ್ನು ಮುಖ್ಯವಾಗಿ ಆಯುರ್ವೇದದಲ್ಲಿ ಔಷಧಿ ತಯಾರಿಕೆಗೆ ಬಳಸುತ್ತಾರೆ. ಇದರ ಬೇರಿನ ರಸ ಹಿಂಡಿ ಎಣ್ಣೆಯೊಂದಿಗೆ ಕುದಿಸಿ ನೋವು ನಿವಾರಕವಾಗಿ ಸುಟ್ಟಗಾಯಗಳಿಗೆ ಲೇಪಿಸುತ್ತಾರೆ. ಕಾಂಡದ ತೊಗಟೆ ಹಾವು ಕಚ್ಚಿದವರ ಪ್ರತಿವಿಷ ಮದ್ದಿನ ತಯಾರಿಕೆಯಲ್ಲಿ ಬಳಸಲ್ಪಡುವ ಪ್ರಮುಖ ವಸ್ತು. ಕಾಂಡದ ರಸ ಹಾಗೂ ಎಲೆ ರಸಗಳು ಅಸ್ತಮಾ, ಮೂತ್ರಕಲ್ಲು, ವಾಯುಪ್ರಕೋಪ, ಕುಷ್ಠ ಹಾಗೂ ರಕ್ತಸಂಬಂಧೀ ಕಾಯಿಲೆಗಳ ಶಮನೌಷಧ ತಯಾರಿಕೆಯಲ್ಲಿ ಬಳಸಲ್ಪಡುತ್ತದೆ. ಬೇರಿನಿಂದ ತಯಾರಾದ ಔಷಧಿಗಳು ವಿವಿಧ ಚರ್ಮರೋಗಗಳಿಗೆ ರಾಮಬಾಣ.

ಮುಳ್ಳು ಕುರುಮ ಜನಾಂಗೀಯರು ಬೆಳೆದ ಹಸುರೆಲೆಗಳನ್ನು ಅರೆದು ಗಂಟಲ ಸಂಬಂಧೀ ರೋಗಗಳಿಗೆ ಕೊರಳಿಗೆ ಲೇಪ ಹಚ್ಚುತ್ತಾರೆ ಹಾಗೂ ತೊಗಟೆ ಕಷಾಯವನ್ನು ಮೂತ್ರ ಸಂಬಂಧಿ ಕಾಯಿಲೆಗಳಿಗೆ ಬಳಸುತ್ತಾರಂತೆ. ಮಲೇಷ್ಯಾ ಹಾಗೂ ಇಂಡೋನೇಷ್ಯಾಗಳಲ್ಲಿ ಈ ಸಸ್ಯ ಸಾಮಾನ್ಯ ಶೀತ ಹಾಗೂ ಕೆಮ್ಮು ನಿವಾರಣೆಗಳ ಸಿದ್ಧೌಷಧಿಯ ತಯಾರಿಕೆಯಲ್ಲೇ ಬಳಸಲ್ಪಡುತ್ತದಂತೆ.

ಎಲೆಯುದುರಿಸುವ ಸಸ್ಯವಾಗಿದ್ದು ಸಾಮಾನ್ಯವಾಗಿ ಜನವರಿಯಲ್ಲಿ ಇದರ ಎಲೆಗಳು ಬಿದ್ದು ಹೋಗುತ್ತವೆ. ಪುನಃ ಚಿಗುರಿ ಎಪ್ರಿಲ್– ಮೇಯಲ್ಲಿ ಹೂ ಬಿಟ್ಟು, ಜೂನ್ ನಲ್ಲಿ ಕಾಯಿಗಳು ಮಾಗಿ ಬೀಜ ದೊರೆಯುತ್ತವೆ. ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಕಂಡುಬರುವ ಇದನ್ನು, ದಕ್ಷಿಣ ಏಷ್ಯಾದ ಹೆಚ್ಚಿನ ದೇಶಗಳು ಬೆಳೆಯುತ್ತವೆ.